ಕ್ರೋಮೈಟ್ ಗಣಿಗಾರಿಕೆಯನ್ನು ಪುನರಾಂಭಿಸಲು ಅನುಮತಿ ನೀಡುವುದು

248(3697); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ಚನ್ನರಾಯಪಟ್ಟಣ ತಾಲ್ಲೂಕು ತಗಡೂರು, ಕೆಂಬಾಳು ಮತ್ತು ಬೈರಾಪುರಗಳಲ್ಲಿ ಕ್ರೋಮೈಟ್ ಗಣಿಗಾರಿಕೆಯನ್ನು ಪುನಃರಾರಂಭಿಸಲು ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪ್ರದೇಶದಲ್ಲಿರುವ ಕೆಂಬಾಳು, ತಗಡೂರು ಮತ್ತು ಬೈರಾಪುರ ವ್ಯಾಪ್ತಿಯಲ್ಲಿ ಚಾಲನೆಯಲ್ಲಿದ್ದ ಕ್ರೋಮೇಟ್ ಗಣಿಗಾರಿಕೆಯು ಸ್ಥಗಿತಗೊಳ್ಳಲು ಕಾರಣಗಳೇನು;

ಇ) ಈ ಹಿಂದೆ ಸದರಿ ಪ್ರದೇಶಗಳಲ್ಲಿನ ಗಣಿಗಾರಿಕೆಯಿಂದ ಸರ್ಕಾರಕ್ಕೆ ಬರುತ್ತಿದ ಆದಾಯದ ಮೊತ್ತವೆಷ್ಟು; ಈ ಗಣಿಗಾರಿಕೆಯಿಂದ ಸ್ಥಳೀಯರಿಗೆ ನೀಡಿದ ಉದ್ಯೋಗಗಳೆಷ್ಟು;

ಈ) ಈ ಪ್ರದೇಶಗಳಲ್ಲಿ ಕ್ರೋಮೈಟ್ ಮೈನಿಂಗ್ ಮಾಡಲು ಸೂಕ್ತ ಪ್ರಮಾಣದಲ್ಲಿ ಕ್ರೋಮೈಟ್ ಕಲ್ಲುಗಳು ಲಭ್ಯವಿದ್ದು, ಸ್ಥಳೀಯರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಗಣಿಗಾರಿಕೆಯನ್ನು ಪುನಃರಾರಂಭಿಸಲು ಅನುಮತಿ ನೀಡಲು ಸರ್ಕಾರದ ನಿಲುವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಚನ್ನರಾಯಪಟ್ಟಣ ತಾಲ್ಲೂಕು ತಗಡೂರು ಕೆಂಬಾಳು ಮತ್ತು ಬೈರಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಮೆ:ಮೈಸೂರು ಮಿನರಲ್ಸ್ ಸಂಸ್ಥೆಯವರಿಗೆ 3 ಕ್ರೋಮೈಟ್ ಗಣಿಗುತ್ತಿಗೆ ಮಂಜೂರಾಗಿದ್ದು, ಗುತ್ತಿಗೆ ಅವಧಿ ಚಾಲ್ತಿಯಲ್ಲಿರುತ್ತದೆ. ಆದರೆ ಕೆಲವು ಶಾಸನಬದ್ಧ ಅನುಮತಿಗಳ ನವೀಕರಣಕ್ಕೆ(DGMS, IBM, KSPCB) ಅರ್ಜಿ ಸಲ್ಲಿಸಿದ್ದರೂ ನವೀಕರಣ ಆಗದೇ ಇರುವುದರಿಂದ ಪ್ರಸ್ತುತ ಗಣಿಗಾರಿಕೆ ಚಟುವಟಿಕೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ.

ಆ) ತಗಡೂರು ಕೆಂಬಾಳು ಮತ್ತು ಬೈರಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಮೆ:ಮೈಸೂರು ಮಿನರಲ್ಸ್ ಸಂಸ್ಥೆಗೆ ಮಂಜೂರಾಗಿರುವ 3 ಗಣಿಗುತ್ತಿಗೆಗಳ ಪ್ರಸ್ತುತ ಸ್ಥಿತಿಗತಿಗಳ ವಿವರಗಳು ಕೆಳಕಂಡಂತಿವೆ;

1) **ತಗಡೂರು ಕ್ರೋಮೈಟ್ ಗಣಿ (ಗುತ್ತಿಗೆ ಸಂಖ್ಯೆ 2477):–** 614.99 ಹೆಕ್ಟೇರ್ ವಿಸ್ತೀರ್ಣದಲ್ಲಿ ಗಣಿಗಾರಿಕೆ ನಡೆಸಲು ಗಣಿಗುತ್ತಿಗೆಯನ್ನು ದಿನಾಂಕ:25.01.2005 ರಿಂದ 20 ವರ್ಷಗಳ ಅವಧಿಗೆ ನವೀಕರಿಸಲಾಗಿದ್ದು, ಮಾರ್ಚ್ 2012ರವರೆಗೆ ಉತ್ಪಾದನೆ ಕಾರ್ಯ ನಡೆಸಲಾಗಿರುತ್ತದೆ. ದಿನಾಂಕ: 01.04.2012 ರಿಂದ ಸದರಿ ಗುತ್ತಿಗೆ ಪ್ರವೇಶಕ್ಕೆ ಕೇಂದ್ರ ಸರ್ಕಾರದ IBM ನಿಂದ ನೀಡಲಾಗುವ ಮೈನಿಂಗ್ ಸ್ಕೀಮ್ ಚಾಲ್ತಿಯಲ್ಲಿರದ ಕಾರಣ ಸ್ಥಗಿತಗೊಳಿಸಲಾಗಿತ್ತು. ಆದರೆ ಈಗ Scheme of Mining ಗೆ ಅನುಮೋದನೆ ದೊರಕಿರುವುದರಿಂದ ಪ್ರಸ್ತುತ ಈ ದಾಖಲೆ ಆಧಾರದಲ್ಲಿ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ Consent for Operation (CFO) ಪಡೆಯಲು ಅರ್ಜಿ ಸಲ್ಲಿಸಲಾಗಿದೆ. ಸದರಿ ಅನುಮತಿ ದೊರೆತ ಕೂಡಲೇ ಉತ್ಪಾದನೆ ಕಾರ್ಯ ಪುನರ್ ಪ್ರಾರಂಭಿಸಲಾಗುವುದು.

2) **ಭೈರಾಪುರ ಕ್ರೋಮೈಟ್ ಗಣಿ (ಗುತ್ತಿಗೆ ಸಂಖ್ಯೆ 2496):–** 18.61 ಹೆಕ್ಟೇರ್ ವಿಸ್ತೀರ್ಣದಲ್ಲಿ ಗಣಿಗಾರಿಕೆ ನಡೆಸಲು ದಿನಾಂಕ: 17.11.97 ರಿಂದ 20 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಲಾಗಿದ್ದು, underground ಗಣಿಗಾರಿಕೆ ಪದ್ಧತಿಯಲ್ಲಿ 31.10.2008ರವರೆಗೆ ಉತ್ಪಾದನಾ ಕಾರ್ಯವನ್ನು ನಡೆಸಲಾಗಿರುತ್ತದೆ. ತದನಂತರ ಕೇಂದ್ರ ಗಣಿ ಸುರಕ್ಷ ನಿರ್ದೇಶನಾಲಯದ ನಿರ್ದೇಶನದಂತೆ underground mining ನ್ನು ಗಣಿ ಸುರಕ್ಷತೆಯ ದೃಷ್ಟಿಯಿಂದ ಸ್ಥಗಿತಗೊಳಿಸಲಾಗಿರುತ್ತದೆ. ಪ್ರಸ್ತುತ ಗಣಿ ಸುರಕ್ಷತಾ ನಿರ್ದೇಶನಾಲಯದ ನಿರ್ದೇಶನದಂತೆ ತೆರೆದ ಗಣಿಗಾರಿಕೆ ಪದ್ಧತಿ

(open cast mining) ಅನುಸರಿಸಿ ಉತ್ಪಾದನೆ ಕಾರ್ಯ ಪುನರ್ ಪ್ರಾರಂಭಿಸಲು ಪ್ರಯತ್ನ ನಡೆಸಲಾಗುತ್ತಿದೆ.

ಈ ನಿಟ್ಟಿನಲ್ಲಿ ಕೇಂದ್ರ ಗಣಿ ಸುರಕ್ಷತಾ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಹ ಸಲ್ಲಿಸಲಾಗಿದ್ದು, ದಿನಾಂಕ:02.07.2014ರಂದು ಸದರಿಯವರು ಗಣಿ ಪ್ರದೇಶದ ತಪಾಸಣೆ ಸಹ ನಡೆಸಿದ್ದು, ತಾಂತ್ರಿಕ ನಿರ್ದೇಶನಗಳನ್ನು ನಿರೀಕ್ಷಿಸುತ್ತಿದ್ದು, ಅದರಂತೆ ಅಗತ್ಯ ಕ್ರಮಕೈಗೊಂಡು ಗಣಿ ಚಟುವಟಿಕೆ ಪುನರ್ ಪ್ರಾರಂಭಿಸಲು ಕ್ರಮವಹಿಸಲಾಗುವುದು.

3) **ಭೈರಾಪುರ ಕ್ರೋಮೈಟ್ ಗಣಿ (ಗುತ್ತಿಗೆ ಸಂಖ್ಯೆ 2510):–** 79.32 ಹೆಕ್ಟೇರ್ ವಿಸ್ತೀರ್ಣಕ್ಕೆ ಗಣಿಗುತ್ತಿಗೆಯನ್ನು ದಿನಾಂಕ: 18.10.2002 ರಿಂದ 20 ವರ್ಷ ಅವಧಿಗೆ ನವೀಕರಿಸಲಾಗಿದೆ. ಈ ಪ್ರದೇಶವನ್ನು ಅಕ್ಕಪಕ್ಕದ ಗಣಿ ಪ್ರದೇಶಗಳಲ್ಲಿ ಉತ್ಪಾದನೆಗೆ ಅನುಕೂಲವಾಗುವಂತೆ ಬೇಕಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು (ಮನೆಗಳು, ಆಫೀಸ್, ಸ್ಟಾಕ್‌ಯಾರ್ಡ್, ಇತ್ಯಾದಿ) ಬಳಸಲಾಗುತ್ತಿದೆ.

ಇ)

ಕ್ರ.ಸಂ.	ಗಣಿ ಗುತ್ತಿಗೆ ಸಂಖ್ಯೆ	ಸರ್ಕಾರಕ್ಕೆ ಸಂದಾಯವಾದ ಒಟ್ಟು ಮೊತ್ತ (₹ ಲಕ್ಷಗಳಲ್ಲಿ)
1	2477	99.12
2	2496	256.46
3	2510	14.43
ಒಟ್ಟು		**370.01**

ಈ ಹಿಂದೆ ಗಣಿ ಚಟುವಟಿಕೆ ನಡೆಯುತ್ತಿದ್ದ ಸಂದರ್ಭದಲ್ಲಿ ಬಹುತೇಕ ತಾಂತ್ರಿಕೇತರ ಕೆಲಸಗಳಿಗೆ ಸ್ಥಳೀಯರನ್ನು ನೇಮಿಸಿಕೊಳ್ಳಲಾಗುತ್ತಿತ್ತ. ಈ

ಹಿಂದೆ ಭೈರಾಪುರ ಮತ್ತು ತಗಡೂರುಗಳಲ್ಲಿ ಗಣಿಗಳಲ್ಲಿ ಸರಾಸರಿ 100 ರಿಂದ 150 ಸ್ಥಳೀಯ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು, ಅವರಲ್ಲಿ ಕೆಲವರನ್ನು ಸಂಸ್ಥೆಯ ಖಾಯಂ ನೌಕರರಾಗಿ ನೇಮಿಸಿಕೊಳ್ಳಲಾಗಿದ್ದು, ಪ್ರಸ್ತುತ ತಗಡೂರು ಗಣಿಯಲ್ಲಿ 70, ಭೈರಾಪುರ ಗಣಿಯಲ್ಲಿ 34 ಸೇರಿ ಒಟ್ಟು 104 ಸ್ಥಳೀಯ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

ಈ) ಈ ಎಲ್ಲಾ ಗಣಿಗಳಲ್ಲಿ ಗಣಿಗಾರಿಕೆಯನ್ನು ಪುನರ್ ಪ್ರಾರಂಭಿಸುವುದು ಸರ್ಕಾರದ ನಿಲುವಾಗಿದೆ. ಆದರೆ, ಮೇಲೆ ವಿವರಿಸಿರುವಂತೆ ಶಾಸನಬದ್ಧ ದಾಖಲೆಗಳ ನವೀಕರಣ ಬಾಕಿ ಇರುವುದರಿಂದ ಮತ್ತು ಗಣಿ ಸುರಕ್ಷ ನಿರ್ದೇಶನಾಲಯ (DGMS) ವತಿಯಿಂದ ಗಣಿಗಾರಿಕೆ ಪದ್ಧತಿ ಬದಲಾವಣೆಗೆ ಅವಶ್ಯ ಅನುಮತಿ ಪಡೆದ ನಂತರ ಗಣಿಗಾರಿಕೆಯನ್ನು ಪುನರ್ ಪ್ರಾರಂಭಿಸಲಾಗುವುದು.

ಟ್ರಾಫಿಕ್ ಪೊಲೀಸ್ ಠಾಣೆ ತೆರೆಯುವುದು

249(2929); ಶ್ರೀ ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ಪಟ್ಟಣಕ್ಕೆ ಹೊಂದಿಕೊಂಡಂತೆ ಪ್ರತ್ಯೇಕ ಸಂಚಾರಿ ಪೊಲೀಸ್ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಂತೆ ಸಂಚಾರಿ ವಾಹನಗಳ ದಟ್ಟಣೆ ಬಹಳ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಟ್ರಾಫಿಕ್ ಪೊಲೀಸ್ ಠಾಣೆ ತೆರೆಯಲು ಇರಬೇಕಾದ ನಿಯಮಗಳು ಯಾವುವು (ಮಾಹಿತಿ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಹೌದು.

ಆ) ಹೌದು.